(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಇಂತಹ *

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಯಡಿಯೂರಪ್ಪ ಹೇಳಿದ ತಕ್ಷಣ ಜನ ವಿರೋಧಿ ಸರ್ಕಾರ ಆಗುವುದಿಲ್ಲ. ಯಡಿಯೂರಪ್ಪ ಹೇಳಿದ ತಕ್ಷಣ ಕೆಟ್ಟಸರ್ಕಾರ ಆಗುವುದಿಲ್ಲ. ಹೋಗಿ ತಾವು ಜನರ ಹತ್ತಿರ, ಏನು ಇವರು ಹೇಳಿದಂತೆ ಎಲ್ಲಾ ಆಗುತ್ತದೆಯೇ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ you are not maintaining order in the House. ತಾವು ಆರ್ಡರ್‌ನ್ನು ಮೈನ್‌ಟೇನ್ ಮಾಡುತ್ತಿಲ್ಲ ಸದನದಲ್ಲಿ. ತಾವು ಅವರು ಪಾಯಿಂಟ್ ಆಫ್ ಆರ್ಡರ್ ಅನ್ನು ರೈಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ತಾವು ರೂಲಿಂಗ್ ಕೊಡದೇ ಈ ಸಭೆಯನ್ನು ನಡೆಸುವುದು ಘನತೆ ಅಲ್ಲ. It is not respect of the House.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಇಂತಹ ಬೇಜವಾಬ್ದಾರಿ ಸರ್ಕಾರದ ವರ್ತನೆಯನ್ನು ಖಂಡಿಸಿ ನಾವು ಹೊರಗಡೆ ಹೋಗುತ್ತೇವೆ.

(ಬಿ.ಜೆ.ಪಿ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಸಿದ್ಧರಾಮಯ್ಯ: ನಾವು ಡಿವಿಜನಲ್ ಕಮೀಷನರ್ ಕಡೆಯಿಂದ ತನಿಖೆ ಮಾಡಿಸಿ ವರದಿ ತೆಗೆದುಕೊಂಡು ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇವರು ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದವರು ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ. ನಾವು ಯಾರಿಗೂ ಕೂಡ ರಕ್ಷಣೆ ಮಾಡುವಂತಹ ಅವಶ್ಯಕತೆ ಇಲ್ಲ. ಇವರು ಪ್ರಚಾರಕೋಸ್ಕರ ದಿನ ಒಂದೊಂದು ವಿಚಾರವನ್ನು ತೆಗೆದುಕೊಂಡು ಬಂದು ಈ ರೀತಿ ಸಮಯ ಹಾಳು ಮಾಡುತ್ತಿದ್ದರೆ ಇವರಿಗೆ ಯಾವ ಜವಾಬ್ದಾರಿ ಇದೆ ಎಂದು ನಾವು ಕೇಳಬೇಕಾಗುತ್ತದೆ. ಸರ್ಕಾರದ ಹಣ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಸಹ ನಾವು ನೋಡಬೇಕಾಗುತ್ತದೆ. ಇವರಿಗೆ ಮಾತನಾಡುವುದಕ್ಕೆ

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.